**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನಗಿರಿ,**

**ನ್ಯಾಯಾಲಯದಲ್ಲಿ**

**ಸಿಸಿ ನಂ.1041/2026**

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿತರು:** |
|---|---|---|
| ಸಂತೆಬೆನ್ನೂರು ಪೊಲೀಸ್ ಠಾಣೆ | | 1. ಹರ್ಷ<br>ಬಿನ್ ಮಲ್ಲೇಶಪ್ಪ,<br>ವಯಸ್ಸು: 25 ವರ್ಷ,<br>ವಾಸಃ ಚಿಕ್ಕದೇವರಹಳ್ಳಿ ಗ್ರಾಮ,<br>ಚನ್ನಗಿರಿ ತಾಲ್ಲೂಕು,<br><br>2. ಮಹೇಶ್ವರಪ್ಪ<br>ಬಿನ್ ಬಸವರಾಜಪ್ಪ,<br>ವಯಸ್ಸುಃ 45 ವರ್ಷ,<br>ವಾಸಃ ಚಿಕ್ಕದೇವರಹಳ್ಳಿ ಗ್ರಾಮ,<br>ಚನ್ನಗಿರಿ ತಾಲ್ಲೂಕು.<br><br>3. ಮಲ್ಲಿಕಾರ್ಜುನಪ್ಪ<br>ಬಿನ್ ಶಿವಲಿಂಗಪ್ಪ,<br>ವಯಸ್ಸುಃ 58 ವರ್ಷ,<br>ವಾಸಃ ಮಲ್ಲನಾಯಕನಕಟ್ಟೆ ಗ್ರಾಮ,<br>ಚನ್ನಗಿರಿ ತಾಲ್ಲೂಕು. |

ಶ್ರೀ.ವಜ್ರೇಶ ಬಿ.ಎ. ಎಲ್.ಎಲ್.ಬಿ., 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನಗಿರಿ ಆದ ನಾನು ಈ ಮೇಲ್ಕಂಡ ಆರೋಪಿತರಾದ ನಿಮ್ಮನ್ನು ಈ ಕೆಳಕಂಡ ಆರೋಪಣೆಗೆ ಗುರಿಪಡಿಸುತ್ತೇನೆ.

**ಆಪಾದನೆ**

ದಿನಾಂಕ 04.11.2025 ರಂದು ಬೆಳಿಗ್ಗೆ ಚನ್ನಗಿರಿ ತಾಲ್ಲೂಕು ಸಂತೆಬೆನ್ನೂರು ಪೊಲೀಸ್ ಠಾಣೆ ವ್ಯಾಪ್ತಿಯ ಚಿಕ್ಕಬೆನ್ನೂರು ಗ್ರಾಮದಿಂದ ಕಾಕನೂರಿಗೆ ಹೋಗುವ ಕಚ್ಚಾ ರಸ್ತೆಯಲ್ಲಿ ಪರಮೇಶ್ವರಪ್ಪನವರ ಮಾವಿನ ತೋಟದ ಬಳಿ ರಸ್ತೆಯಲ್ಲಿ 1 ನೇ ಆರೋಪಿಯಾದ ನೀವು ಚಿಕ್ಕಬೆನ್ನೂರಿನಿಂದ ಕೂಲಿಯವರನ್ನು ಅಡಿಕೆ ಸುಲಿಯುವ ಕೂಲಿ ಕೆಲಸಕ್ಕೆ ಚಿಕ್ಕದೇವರಹಳ್ಳಿಗೆ

ನಂಬರ್ ಬರೆಯದ (KA.17/ಟಿಬಿ-9268-ಕೆಎ-17-ಟಿಸಿ-7734) ನೇ ಟ್ರ್ಯಾಕ್ಟರ್ ನಲ್ಲಿ ತಾನೇ ಚಾಲನೆ ಮಾಡಿಕೊಂಡು ಕರೆದುಕೊಂಡು ಹೋಗಿದ್ದು ಕೆಲಸ ಮುಗಿದ ನಂತರ ಸಂಜೆ ವಾಪಸ್ಸು ಕರೆದುಕೊಂಡು ಬರುತ್ತಿರುವಾಗ ಚಿಕ್ಕಬೆನ್ನೂರು ಹತ್ತಿರದ ಪರಮೇಶ್ವರಪ್ಪನವರ ಮಾವಿನ ತೋಟದ ಬಳಿ ರಸ್ತೆಯಲ್ಲಿ ತಮ್ಮ ಟ್ರ್ಯಾಕ್ಟರ್ ನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ರಸ್ತೆ ಬದಿಯಲ್ಲಿ ಟ್ರ್ಯಾಕ್ಟರನ್ನು ಪಲ್ಟಿ ಮಾಡಿ ಬೀಳಿಸಿದ ಪರಿಣಾಮ ಅಪಘಾತವಾಗಿದ್ದು, ಈ ಮೂಲಕ 1 ನೇ ಆರೋಪಿಯಾದ ನೀವು ಕಲಂ 281 ಬಿ.ಎನ್.ಎಸ್ ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಒಳಗೆ ಎಸಗಿರುವಿರಿ ಎಂದು ಅಪಾದಿಸಲಾಗಿದೆ?

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ನೇ ಆರೋಪಿಯಾದ ನೀವು ಮೇಲ್ಕಂಡ ವಾಹನವನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ರಸ್ತೆ ಬದಿಯಲ್ಲಿ ಪಲ್ಟಿ ಮಾಡಿ ಬೀಳಿಸಿದ ಪರಿಣಾಮ ಟ್ರ್ಯಾಲಿಯಲ್ಲಿದ್ದ ಚಾಸಾ.7 ರವರ ಎರಡೂ ಮುಂಗೈ ಮೂಳೆ ಮುರಿದು ತೀವ್ರ ಸ್ವರೂಪದ ಗಾಯಗಳಾಗಿರುತ್ತದೆ. ಆ ಮೂಲಕ 1 ನೇ ಆರೋಪಿಯಾದ ನೀವು 125(ಬಿ) ಬಿ.ಎನ್.ಎಸ್ ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಒಳಗೆ ಎಸಗಿರುವಿರಿ ಎಂದು ಅಪಾದಿಸಲಾಗಿದೆ?

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 2 ನೇ ಆರೋಪಿಯಾದ ನೀವು KA.17/ಟಿಬಿ-9268 ನೇ ಟ್ರ್ಯಾಕ್ಟರ್ ಇಂಜಿನ್‌ಗೆ ನೊಂದಣಿ ಸಂಖ್ಯೆ ಬರೆಸದೆ, 3 ನೇ ಆರೋಪಿಯಾದ ನೀವು ಕೆಎ-17-ಟಿಸಿ-7734 ನೇ ಟ್ರ್ಯಾಲಿಗೆ ನೊಂದಣಿ ಸಂಖ್ಯೆ ಬರೆಸದೆ, 1 ನೇ ಆರೋಪಿಗೆ ಚಾಲನೆ ಮಾಡಲು ನೀಡಿರುತ್ತಾರೆ. ಆ ಮೂಲಕ 2 ಮತ್ತು 3 ನೇ ಆರೋಪಿತರಾದ ನೀವು ಮೋಟಾರ್ ವಾಹನ ಕಾಯ್ದೆ ಕಲಂ.177 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಎಸಗಿರುವಿರಿ?

1. ಈಗ ಓದಿ ಹೇಳಿದ ನಿಮ್ಮ ಮೇಲಿನ ಆಪಾದನೆಯನ್ನು ಕೇಳಿದ್ದೀರಾ? ತಿಳಿಯಿತೇ?

ಆರೋಪಿ 1 ಉತ್ತರಃ

ಆರೋಪಿ 2 ಉತ್ತರಃ

ಆರೋಪಿ 3 ಉತ್ತರಃ

2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?

**ಆರೋಪಿ** 1 **ಉತ್ತರಃ**

**ಆರೋಪಿ** 2 **ಉತ್ತರಃ**

**ಆರೋಪಿ** 3 **ಉತ್ತರಃ**

(ಆರೋಪಿತರ ವಕೀಲರಿಗೆ ಆರೋಪಣೆಯ ಸಾರಾಂಶವನ್ನು ದಿನಾಂಕಃ 06.07.2026 ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಕೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.)

**ಸ್ಥಳಃ ಚನ್ನಗಿರಿ** ಸಹಿ/–

**ದಿನಾಂಕಃ** 06.07.2026 **2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ ಎಂ ಎಫ್ ಸಿ ನ್ಯಾಯಾಲಯ, ಚನ್ನಗಿರಿ.**

ಆರೋಪಿ 1 ರಿಂದ 3